**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ' ಸೋಜಾ ರವರು ನಿಯಮ 72ರ ಅಡಿಯಲ್ಲಿ ಕೋರಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:111ಕ್ಕೆ ಉತ್ತರ.**

**ಪ್ರಶ್ನೆ:**

**ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಸ್ಥಾಪಿಸಲಾದ ಅಂತರರಾಷ್ಟ್ರೀಯ ಮಟ್ಟದ ಈಜುಕೊಳ (ಸ್ವಿಮಿಂಗ್ ಪೂಲ್) ಎಮ್ಮೆಕೆರೆಯಲ್ಲಿ ಕಳೆದ 1 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳು ಮತ್ತು ಈಜುಕೊಳದಲ್ಲಿ ಕ್ರೀಡೆಯಲ್ಲಿ ಭಾಗವಹಿಸುವ ಯುವಕರು/ಯುವತಿಯರು/ಮಕ್ಕಳು ಪ್ರಸ್ತುತ ಈಜುಕೊಳದ ಪ್ರಯೋಜನೆ ಪಡೆಯುತ್ತಿದ್ದಾರೆ. ಆದಾಗ್ಯೂ ರಾಜ್ಯ, ದೇಶ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಕಗಳನ್ನು ಗಳಿಸಿದ ಸ್ಪರ್ಧಾಳುಗಳಿಗೆ ಸಂಜೆ 6 ರಿಂದ 9 ಗಂಟೆವರೆಗೆ ಅಭ್ಯಾಸಕ್ಕಾಗಿ ಉಚಿತವಾಗಿ ಈಜುಕೊಳದಲ್ಲಿ ಅವಕಾಶ ಮಾಡಿಕೊಡಬೇಕೆಂದು ದಕ್ಷಿಣ ಕನ್ನಡ ಜಿಲ್ಲೆಯ ಸ್ವಿಮಿಂಗ್ ಅಸೋಸಿಯೇಷನ್ (ರಿ) ಕೋರಿಕೊಂಡಿದ್ದಾರೆ. ಅವರ ಬೇಡಿಕೆಯು ಸಾರ್ವಜನಿಕ ಹಿತಾಸಕ್ತಿಯಿಂದ ಕೂಡಿದ್ದು, ಕ್ರಮಕ್ಕೆಗೊಳ್ಳುವಂತೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯ ಬಯಸುತ್ತೇನೆ.**

**ಉತ್ತರ:**

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ಥಾಪಿಸಲಾದ ಅಂತರಾಷ್ಟ್ರೀಯ ಮಟ್ಟದ ಈಜುಕೊಳ (ಸ್ವಿಮ್ಮಿಂಗ್ ಪೂಲ್) ಕಳೆದ 1 ವರ್ಷದಿಂದ ಕಾರ್ಯ ನಿರ್ವಹಿಸುತ್ತಿದ್ದು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳು ನಡೆಯುತ್ತಿರುತ್ತವೆ. ಕ್ರೀಡೆಯಲ್ಲಿ ಭಾಗವಹಿಸುವ ಯುವಕರು/ಯುವತಿಯರು/ ಮಕ್ಕಳು ಈಜುಕೊಳದ ಪ್ರಯೋಜನವನ್ನು ಪಡೆಯುತ್ತಿದ್ದಾರೆ.

ಇಲ್ಲಿ ಒಟ್ಟು 3 ಈಜುಕೊಳಗಳು ಇದ್ದು, ರಾಜ್ಯ, ದೇಶ, ಅಂತರಾಷ್ಟ್ರೀಯ ಮಟ್ಟದಲ್ಲಿ ಪದಕಗಳನ್ನು ಗಳಿಸಿದ ಸ್ಪರ್ಧಾಳುಗಳಿಗೆ ಸ್ಪರ್ಧಾ ಈಜುಕೊಳದಲ್ಲಿ ಈ ಕೆಳಕಂಡಂತೆ ಅವಕಾಶವನ್ನು ಕಲ್ಪಿಸಲಾಗಿದೆ.

| ಪೂಲ್ ಸಂಖ್ಯೆ | ಪೂಲ್ ವಿವರ | ಅವಕಾಶ ಕಲ್ಪಿಸಲಾದ ವಿವರ | ಶುಲ್ಕ (ರೂ) | ಬ್ಯಾಚ್ ಅವಧಿ |
|---|---|---|---|---|
| 1 | ಸ್ಪರ್ಧಾ ಈಜುಕೊಳ (50.00 x 25.00 x 2.2/1.4 M) | ಕ್ರೀಡಾಪಟುಗಳು | ಮಾಸಿಕ ರೂ. 2000 | • ಬೆಳಿಗ್ಗೆ 5.00 ರಿಂದ 9.45(4ಗಂಟೆ 45ನಿಮಿಷಗಳು) • ಸಂಜೆ 3.00 ರಿಂದ 9.45(6ಗಂಟೆ 45 ನಿಮಿಷಗಳು) |
| | | ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಸಾಧಕರು | ಮಾಸಿಕ ರೂ. 1000 | |
| 2 | ಅಭ್ಯಾಸ ಈಜುಕೊಳ (25.00 x 10.00x 2.2 M) | ಸಾರ್ವಜನಿಕರು | ಗಂಟೆಗೆ ರೂ. 100 ಮಾಸಿಕ ರೂ. 2000 ತರಬೇತಿಗೆ ಮಾಸಿಕ ರೂ. 4000 | ಬೆಳಿಗ್ಗೆ 6.00 ರಿಂದ 10.45 ಸಂಜೆ 3.00 ರಿಂದ 8.45 |
| | | ಮಕ್ಕಳು | ಗಂಟೆಗೆ ರೂ. 80 ಮಾಸಿಕ ರೂ. 1600 ತರಬೇತಿಗೆ ಮಾಸಿಕ ರೂ. 3500 | |
| 3 | ಮಕ್ಕಳ ಕೊಳ (13.80 x 6.00 x 1.2 M) | 12 ವರ್ಷದೊಳಗಿನ ಮಕ್ಕಳು ಮತ್ತು ಕಲಿಕಾ ಹಂತದ ಮಕ್ಕಳು | ಗಂಟೆಗೆ ರೂ. 80 ಮಾಸಿಕ ರೂ. 1600 ತರಬೇತಿಗೆ ಮಾಸಿಕ ರೂ. 3500 | ಬೆಳಿಗ್ಗೆ 6.00 ರಿಂದ 10.45 ಸಂಜೆ 3.00 ರಿಂದ 8.45 |

ಸ್ಪರ್ಧಾ ಈಜುಕೊಳದಲ್ಲಿ ಕ್ರೀಡಾಪಟುಗಳು ಹಾಗೂ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಸಾಧಕರಿಗೆ ಮಾತ್ರ ಅವಕಾಶವನ್ನು ಕಲ್ಪಿಸಲಾಗಿದ್ದು, ಶುಲ್ಕದಲ್ಲಿ ರಿಯಾಯಿತಿ ಸೌಲಭ್ಯ ಒದಗಿಸಲಾಗಿದೆ.

ಈಜು ಕ್ರೀಡಾಪಟುಗಳಿಗೆ ಮಾಸಿಕ ರೂ 2,000/- ಶುಲ್ಕ ನಿಗದಿಪಡಿಸಿದ್ದು, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ಈಜು ಕ್ರೀಡಾಪಟುಗಳಿಗೆ ಮಾಸಿಕ ಕೇವಲ ರೂ 1,000/- ಶುಲ್ಕ ವಿಧಿಸಲಾಗುತ್ತಿದೆ. ಅಂತಾರಾಷ್ಟ್ರೀಯ ಮಾನದಂಡಗಳ ಪ್ರಕಾರ ಈಜುಕೊಳವನ್ನು ನಿರ್ವಹಿಸಲು ಕನಿಷ್ಠ ಶುಲ್ಕವನ್ನು ನಿಗದಿಪಡಿಸಿದೆ. ಕ್ರೀಡಾಪಟುಗಳಿಗೆ ಹಾಗೂ ರಾಷ್ಟ್ರ ಮತ್ತು ಅಂತಾರಾಷ್ಟ್ರ ಸಾಧಕರಿಗೆ ಹಾಗೂ ಸ್ಪರ್ಧಾಳುಗಳಿಗೆ ದಿನದಲ್ಲಿ 11 ಗಂಟೆಗಳಿಗೂ ಹೆಚ್ಚು ಸಮಯವನ್ನು ನಿಗದಿಪಡಿಸಿ, ಅಭ್ಯಾಸಕ್ಕಾಗಿ ಅವಕಾಶವನ್ನು ಮಾಡಿಕೊಡಲಾಗಿದೆ.

ವೈಎಸ್ ಡಿ-ಇಬಿಬಿ/67/2025

(ಸಿದ್ದರಾಮಯ್ಯ)
ಮುಖ್ಯಮಂತ್ರಿ